ಓ ಎಸ್ 96/2017 ಪಿ.ಡಬ್ಲ್ಯೂ: 1

ದಿನಾಂಕ: 7/8/2019

ಇಂದು ದಿ:7/8/2019 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ ಎಸ್ ಕೆ ವಕೀಲರಿಂದ:

ನಾನು ಈಗ ಬೆಂಗಳೂರಿನಲ್ಲಿ ವಾಸವಿದ್ದೇನೆ. ನನ್ನ ತಂದೆ ಜೀವಂತವಿದ್ದಾಗ ನಾನು ತಗಡೂರಿನಲ್ಲಿ ವಾಸವಿದ್ದೆ. ನನ್ನ ತಂದೆಯ ಹೆಸರು ಶಿವಸ್ವಾಮಿ ಎಂದರೆ ನಿಜ. ನನ್ನ ತಂದೆಯ ತಾಯಿ ಹೆಸರು ಗೌರಮ್ಮ ಎಂದರೆ ನಿಜ. ಸದರಿ ಗೌರಮ್ಮ ರವರ ಗಂಡನಹೆಸರು ಮಲ್ಲೇಗೌಡ ಎಂದರೆ ನಿಜ. ಮಲ್ಲೇಗೌಡರ ತಾಯಿ ಮಾದಮ್ಮ ಎಂದರೆ ನಿಜ. ಮಾದಮ್ಮ ರವರ ಗಂಡನ ಹೆಸರು ಕುಳ್ಳಪುಟ್ಟೇಗೌಡ ಎಂದರೆ ನಿಜ. ಸದರಿ ಮಲ್ಲೇಗೌಡ , ಕುಳ್ಳಪುಟ್ಟೇಗೌಡ ಹಾಗು ಮಾದಮ್ಮ ಈ ಜೀವಂತವಿಲ್ಲ.

ಮಲ್ಲೆಗೌಡನಿಗೆ 8 ಜನ ಮಕ್ಕಳು. ನನ್ನ ತಾತನ ಜೀವಿಕಾಲದಲ್ಲಿ ಅವರ ಎಲ್ಲ ವಾರಸುದಾರರು ಒಟ್ಟುಕುಟುಂಬದಲ್ಲಿ ವಾಸವಿದ್ದೆವು. ನನ್ನ ತಾತ ಯಾವಾಗ ತೀರಿಕೊಂಡಿದ್ದು ಎಂದು ನನಗೆ ನೆನಪಿಲ್ಲ. ನನ್ನ ತಾತ ಅಂದಾಜು 2008 ರಿಲ್ಲಿ ತೀರಿಕೊಂಡಿದ್ದು ಎಂದು ದಾಖಲೆ ಇದೆ. ನನ್ನ ತಾತ ತೀರಿಕೊಂಡ ನಂತರ ನನ್ನ ಅಜ್ಜಿ ಹಾಗು ನಾವುಗಳೆಲ್ಲಾ ಒಟ್ಟು ಕುಟುಂಬದಲ್ಲಿ ವಾಸವಿದ್ದೇವೆ ಎಂದು ಕೇಳಿದರೆ ಇಲ್ಲ ಎಂದುನುಡಿಯುತ್ತೇನೆ. ನನ್ನ ಅಜ್ಜಿ ಗೌರಮ್ಮ ಈಗ 1 ನೇ ಪ್ರತಿವಾದಿಜೊತೆ ವಾಸವಿದ್ದಾರೆ. ನನ್ನ ತಾತ ತೀರಿಕೊಂಡ ನಂತರ ಅವರ ಮಕ್ಕಳು ಬೇರೆಬೇರೆ ವಾಸವಿದ್ದರು. ಆರೀತಿ ಬೇರೆ ಬೇರೆ ವಾಸಮಾಡಿರುವುದು ವಿಭಾಗವಾಗಿ ವಾಸವಿರುವುದೇ ಅಥವಾ ಬೇರೆ ಯಾವರೀತಿ ಎಂದು ಕೇಳಿದರೆ 1976 – 77 ರಲ್ಲಿ ನನ್ನ ತಾತ ಇದ್ದಾಗಲೇ ವಿಭಾಗಮಾಡಿಕೊಂಡಿದ್ದರು ಹಾಗು ಆಮೇರೆಗೆ ಬೇರೆಬೇರೆ ವಾಸಮಾಡುತ್ತಿದ್ದರು ಎಂದು ನುಡಿಯುತ್ತೇನೆ. ಸದರಿ ವಿಭಾಗದಲ್ಲಿ ನನ್ನ ಚಿಕ್ಕಪ್ಪನಿಗೆ ಎಷ್ಟು ಆಸ್ತಿ ಬಂದಿದೆ ಎಂದು ಕೇಳಿದರೆ ಆಬಗ್ಗೆ ದಾಖಲಾತಿಯೇ ಇದೆ ಎಂದು ನುಡಿಯುತ್ತೆನೆ. ಆ ದಾಖಲಾತಿಯನ್ನು ಈ

ನ್ಯಾಯಾಲಯದಲ್ಲಿಹಾಜರು ಪಡಿಸಿದ್ದೇನೆಯೇ ಎಂದು ಕೇಳಿದರೆ ವಕೀಲರಿಗೆ ನೀಡಿದ್ದೇನೆ ಎಂದು ನುಡಿಯುತ್ತೇನೆ. ಸದರಿ ದಾಖಲೆಗಳನ್ನು ನಾನು ನೋಡಿದ್ದೇನೆ ಹಾಗು ಅದು ನನ್ನ ಬಳಿ



ಇದೆ ಹಾಗು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆ. ನನ್ನ ತಂದೆ ಜೊತೆ ಒಡಹುಟ್ಟಿದವರು ಒಟ್ಟು 8 ಜನ ಪೈಕಿ ಯಾರ ಹೆಸರಿಗೆ ಯಾವಆಸ್ತಿಯನ್ನು ಖಾತೆ ಬದಲಾವಣೆ ಮಾಡಿದ್ದಾರೆಯೋ ಅವರಿಗೇನೆ ಆಯಾಯಾ ಆಸ್ತಿ ಸೇರತಕ್ಕದ್ದು ಎಂದರೆ ನನ್ನ ತಾತ ಮಾಡಿಸಿದ ಕಾಲದಲ್ಲಿ ಆರೀತಿ ಯಾರ ಹೆಸರಿಗೆ ಖಾತೆಯಾಗಿದೆಯೋ ಅವರಿಗೇನೆ ಸೇರತಕ್ಕದ್ದು ಎಂದು ನುಡಿಯುತ್ತೇನೆ. ಮಲ್ಲೆಗೌಡರು ಹಾಗು ಅವರ ತಂದೆ ಪುಟ್ಟೇಗೌಡರಿಗೆ ಎಷ್ಟು ಎಕರೆ ಜಮೀನು ಇತ್ತು ಎಂದು ಹೇಳಲು ಗೊತ್ತಿಲ್ಲ. ಪುಟ್ಟೆಗೌಡರಿಗೆ ಸುಮಾರು 30 ಎಕರೆ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಮಲ್ಲೇಗೌಡರ ತಾಯಿ ಮಾದಮ್ಮವರಿಗೆ ಆಕೆಯ ತಂದೆಯ ಕಡೆಯಿಂದ ಸುಮಾರು 35 - 40 ಎಕರೆ ಜಮೀನು ಬಂದಿತ್ತು ಎಂದರೆ ಗೊತ್ತಿಲ್ಲ. ಮಲ್ಲೇಗೌಡರಿಗೆ ಹಿರಿಯರಿಂದ ಬಂದ ಆಸ್ತಿ ಹಾಗು ಅವರ ತಾಯಿಗೆ ಆಕೆಯ ತವರುಮನೆಯಿಂದ ಬಂದ ಆಸ್ತಿ ಇವೆಲ್ಲವನ್ನೂ ಮಲ್ಲೇಗೌಡರು ಜೀವಿತ ಕಾಲದಲ್ಲಿ ವ್ಯವಸಾಯಮಾಡಿಕೊಂಡು ವ್ಯವಸಾಯಮಾಡಿಕೊಂಡು ಬರುತ್ತಿದ್ದು ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅವರು 1976 - 77 ರಲ್ಲಿ ವಿಭಾಗ ಮಾಡಿಕೊಂಡಿದ್ದರು. ಸದರಿ ವಿಭಾಗಕ್ಕಿಂತ ಮೊದಲೇ 8 ನೇ ಪ್ರತಿವಾದಿ ಜನಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃನುಡಿಯುತ್ತಾರೆ ವಿಭಾಗ ಆದ ನಂತರ ಅವರು ಜನಿಸಿದರು. ಆರೀತಿ ಅವರು ಜನಿಸಿದ್ದರು ಎಂದು ಪುನಃ ಸೂಚಿಸಿದರೆ ಅವಾಗ ಅವರು ಜನಿಸಿದ್ದರೆ ಅವರಿಗೂ ಕೂಡ ವಿಭಾಗ ಕೊಡುತ್ತಿದ್ದರು ಹಾಗು ಅವರು ಜನಿಸಿರಲಿಲ್ಲ ಎಂದು ನುಡಿಯುತ್ತೇನೆ.

ಮುಂದುವರಿದ ಪಾಟೀಸವಾಲನ್ನು ಮದ್ಯಾಹ್ನ 3 ಗಂಟೆಗೆ ಮುದೂಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.